ಶಿಕ್ಷಣ–ಸಂಸ್ಕೃತಿ–ಸಮಾಜ
ನಮ್ಮ ಧ್ಯೇಯ, ನಿಷ್ಠೆ

# ಕೆ.ಸಿ.ಡಿ. ಸಮಾಚಾರ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

KCD JOURNALISM CLUB DHARWAD

ಕರ್ನಾಟಕ ಮಹಾವಿದ್ಯಾಲಯ ಧಾರವಾಡ 100 Years Centenary Celebration 2017-18 KARNATAK COLLEGE DHARWAD

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ:14 ಸಂಪುಟ:3 ಪುಟ:2


@KACD100 @Ksamachar Readers can view at Kcd2017.blogspot.in

## ಬೆಳಕು

ಜೀವನದಲ್ಲಿ ಕೆಟ್ಟ ಸನ್ನಿವೇಶಗಳು ಎದುರಾದಾಗ ನಿಮಗೆ ಮೂರು ಆಯ್ಕೆಗಳಿರುತ್ತವೆ. ನೀವು ಏನೆಂದು ತೋರಿಸುವುದು, ಆ ಘಟನೆಯಿಂದ ನಾಶವಾಗುವುದು ಅಥವಾ ಅದರಿಂದ ಮತ್ತಷ್ಟು ಸಬಲರಾಗುವುದು.

_ಮಾರ್ಕ್ ಟ್ವೈನ್

## Unbelievable facts.



Scientists have announced that a big asteroid is coming towards earth. According to researchers it can strike with earth and if it does there is 100% surety that a city as size of London will be wiped out. Date of strike is 30 june. Astronomers have declared asteroid day on 30 june. Last few days left!!

## ಕೋರಿಕೆ

ಕರ್ನಾಟಕ ಕಲಾ ಮಹಾವಿದ್ಯಾಲಯವು ಶತಮಾನೋತ್ಸವದ ಸಂಭ್ರಮದಲ್ಲಿ ಇದ್ದು, ಈ ಶತಮಾನೋತ್ಸವದಲ್ಲಿ ಕರ್ನಾಟಕ ಕಾಲೇಜಿನ ಎಲ್ಲ ಹಳೆಯ ವಿದ್ಯಾರ್ಥಿಗಳು ಪಾಲ್ಗೊಳ್ಳಲು ಕರ್ನಾಟಕ ಮಹಾವಿದ್ಯಾಲಯವು ವಿಶೇಷವಾಗಿ ಜಾಲತಾಣವನ್ನು ಪ್ರಾರಂಭಿಸಿದೆ. ಆದ್ದರಿಂದ ದೇಶ ವಿದೇಶಗಳಲ್ಲಿರುವ ಕರ್ನಾಟಕ ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಕೆಸಿಡಿ ಶತಮಾನೋತ್ಸವದ ವೆಬ್‌ಸೈಟ್ **WWW.KCDCENTENARY.ORG** ಮೂಲಕ ಕರ್ನಾಟಕ ಕಲಾ ಮಹಾವಿದ್ಯಾಲಯದ ಎಲ್ಲ ವಿದ್ಯಾರ್ಥಿಗಳು ಅಲ್ಯುಮಿನಿ ರಜಿಸ್ಟ್ರೇಶನ್ ಫಾರ್ಮದ ಲಿಂಕ್ ಪುಟದ ಮೂಲಕ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪ್ರಮೋದ ಗಾಯಿ ಎಲ್ಲ ಕೆಸಿಡಿಯ ಹಳೆಯ ವಿದ್ಯಾರ್ಥಿಗಳಿಗೆ ಪ್ರಕಟಣೆ ಮೂಲಕ ಕೋರಿದ್ದಾರೆ.

# "ಕೆ.ಸಿ.ಡಿ ಗೆ ಈಗ ನೂರರ ಸಂಭ್ರಮ"






**ಉನ್ನತ ಶಿಕ್ಷಣ ಸಚಿವರಾದ ಬಸವರಾಜ್ ರಾಯರೆಡ್ಡಿ www.kcdcentenary.org ಕೆಸಿಡಿ ಶತಮಾನೋತ್ಸವದ ಜಾಲತಾಣಕ್ಕೆ ಚಾಲನೆ ನೀಡಿದರು. ಚಿತ್ರದಲ್ಲಿ ಕೆಸಿಡಿ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪ್ರಮೋದ ಗಾಯಿ, ಮಂಗಳೂರು ವಿವಿಯ ವಿಶ್ರಾಂತ ಕುಲಪತಿ ಎಮ್ ಆಯ್ ಸವದತ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾದ ಪ್ರೊ. ಎನ್ ವಾಯ್ ಮಟ್ಟಿಹಾಳ ಇದ್ದಾರೆ.**

ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ಕಲಾ ಮಹಾವಿದ್ಯಾಲಯದ ಶತಮಾನೋತ್ಸವದ ಸಂಭ್ರಮದ ಆಚರಣೆಗೆ 40 ಕೋಟಿ ರೂಪಾಯಿಗಳನ್ನು ಸರಕಾರದಿಂದ ನೀಡಲಾಗುವುದು ಎಂದು ಕರ್ನಾಟಕ ರಾಜ್ಯ ಸರಕಾರದ ಉನ್ನತ ಶಿಕ್ಷಣ ಸಚಿವರಾದ ಬಸವರಾಜ ರಾಯರೆಡ್ಡಿ ಇಂದು ಇಲ್ಲಿ ಘೋಷಿಸಿದರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಶತಮಾನೋತ್ಸವದ ಕಚೇರಿ ಮತ್ತು ಹಾಗೂ ಜಾಲತಾಣವನ್ನು (ವೆಬ್‌ಸೈಟ್) ಉದ್ಘಾಟಿಸಿ ಮಾತನಾಡುತ್ತಿದ್ದರು. ನಾನು ಕರ್ನಾಟಕ ಕಲಾ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಯಾಗಿದ್ದು, ನಾನು ಓದಿದ ಕಾಲೇಜು ಈಗ ಶತಮಾನೋತ್ಸವದ ಸಂಭ್ರಮದ ಆಚರಣೆಯಲ್ಲಿ ಇದ್ದು, ನಾನು ಉನ್ನತ ಶಿಕ್ಷಣ ಸಚಿವನಾಗಿ ನನಗೆ ಒದಗಿ ಬಂದ ಸುವರ್ಣ ಅವಕಾಶ ಇದಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಈಗಾಗಲೇ ಸರಕಾರವು ಐದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಎಂದರು. ಈ ಕಾಲೇಜಿನ ಎಲ್ಲ ಹಳೆಯ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ, ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದ್ದು, ಇದಕ್ಕೆ ಬೇಕಾಗುವ ಎಲ್ಲ ಸಿದ್ಧತೆಗಳಿಗೆ ಸರಕಾರವು ಸಂಪೂರ್ಣವಾಗಿ ಸಹಕಾರ ನೀಡುವುದು ಎಂದರು ಈ ಶತಮಾನೋತ್ಸವದ ಸಂಭ್ರಮ ಆಚರಣೆ ಅರ್ಥಪೂರ್ಣವಾಗ ಬೇಕಾದರೆ ಎಲ್ಲ ವೃತ್ತಿಪರಣಿತರ ಮತ್ತು ಹಳೆಯ ವಿದ್ಯಾರ್ಥಿಗಳ ಸಲಹೆಗಳನ್ನು ಪಡೆದುಕೊಂಡು ವರ್ಷಪೂರ್ತಿ ವಿದ್ಯಾರ್ಥಿಗಳ ಶೈಕ್ಷಣಿಕ ವಾತಾವರಣಕ್ಕೆ ಪೂರಕವಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ಸೂಕ್ತ ಎಂದು ಸಲಹೆ ನೀಡದರು.

ಇಂದು ಜಾಗತಿಕವಾಗಿ ಶಿಕ್ಷಣ ಕ್ಷೇತ್ರದಲ್ಲಿ ಪೈಪೋಟಿ ಇದ್ದು, ಈ ಸಂದರ್ಭದಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಷಯಗಳ ಜೊತೆಗೆ ಕೌಶಲ್ಯ ಆಧಾರಿತ ಕೋರ್ಸಗಳನ್ನು ಪ್ರಾರಂಭಿಸಲು ರಾಜ್ಯ ಸರಕಾರ ಉದ್ದೇಶಿಸಿಲಾಗಿದೆ ಎಂದ ಅವರು ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಬೋಧಕ ಸಿಬ್ಬಂದಿಯನ್ನು ರಾಜ್ಯ ಸರಕಾರವು ನೇಮಕಾತಿ ಮಾಡಿಕೊಳ್ಳಲಾಗುವುದು ಮತ್ತು ಪ್ರಸಕ್ತ ವರ್ಷದಿಂದ ರಾಜ್ಯದ ಎಲ್ಲ ಸರಕಾರಿ ಕಾಲೇಜಿನಲ್ಲಿ ಪ್ರವೇಶ ಪಡೆದ ಎಲ್ಲ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ನೀಡಲಾಗುವುದು ಎಂದರು. ಜೊತೆಗೆ ಇಂದಿನ ದಿನಗಳಲ್ಲಿ ಹೆಣ್ಣುಮಕ್ಕಳ ಪದವಿ ಹಂತದ ಶಿಕ್ಷಣದ ಸಾಕ್ಷರತಾ ಪ್ರಮಾಣ ರಾಜ್ಯದಲ್ಲಿ ಕಡಿಮೆ ಇದ್ದು, ಈ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೂಡಲು ರಾಜ್ಯದ ಎಲ್ಲ ಸರಕಾರಿ ಮತ್ತು ಖಾಸಗಿ ಕಾಲೇಜುಗಳಲ್ಲಿ ಪದವಿ ಓದುತ್ತಿರುವ ಹೆಣ್ಣುಮಕ್ಕಳ ಕಾಲೇಜಿನ ಫೀಸು ಮತ್ತು ಅವರಿಗೆ ಲ್ಯಾಪ್ ಟಾಪ್ ನೀಡಲು ಉದ್ದೇಶಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಮಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಎಮ್ ಆಯ್ ಸವದತ್ತಿ ಮಾತನಾಡಿ ನಾನು ಕರ್ನಾಟಕ ಮಹಾವಿದ್ಯಾಲಯದ ನಾನು ಅತ್ಯಂತ ಹಳೆಯ ವಿದ್ಯಾರ್ಥಿಯಾಗಿದ್ದು, ಕರ್ನಾಟಕ ಕಾಲೇಜು ಶತಮಾನೋತ್ಸವದ ಆಚರಣೆಯನ್ನು ಅರ್ಥಪೂರ್ಣವಾಗಬೇಕಾದರೆ, ಇಲ್ಲಿಯ ವಿದ್ಯಾರ್ಥಿಗಳನ್ನು ಮತ್ತು ಶಿಕ್ಷರನ್ನು ಉತ್ತೇಜಿಸಲು ವಿವಿಧ ವಿಷಯಗಳ ಪರಿಣಿತರನ್ನು ಆಹ್ವಾನಿಸಿಬೇಕು ಮತ್ತು ಈ ಶತಮಾನೋತ್ಸವದ ಸಂಭ್ರಮದ ಆಚರಣೆಯ ನಿಮಿತ್ಯ ಬಹುವಿಷಯ ಆಧಾರಿತ ಸಂಶೋಧನಾ ಸಂಸ್ಥೆಯನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಪ್ರಾರಂಭಿಸಬೇಕು ಎಂದರು. ಇಂದು ಈ ಕಾಲೇಜಿನಲ್ಲಿ ಸಂಶೋಧನಾ ಚಟುವಟಿಕೆ ಅಷ್ಟೊಂದು ಆಶಾದಾಯಕ ಮಟ್ಟದಲ್ಲಿ ಇದೆಯಾದರೂ ಶಿಕ್ಷಕರು ಸಂಶೋಧನೆಗೆ ಹೆಚ್ಚು ಒತ್ತುನಿಡಬೇಕು ಎಂದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಕಾಲೇಜಿನ ವಿಶ್ರಾಂತ ಪ್ರಾಚಾರ್ಯರಾದ ಪ್ರೊ. ಉಷಾಮೂರ್ತಿ ಮಾತನಾಡಿ ಕರ್ನಾಟಕ ಕಾಲೇಜಿಗೆ ಬೋಧನಾ ಸಿಬ್ಬಂದಿಯ ಕೊರತೆ ಇದ್ದು, ಆ ಕೊರತೆಯನ್ನು ನಿಗಿಸಬೇಕು ಎಂದು ಉನ್ನತ ಶಿಕ್ಷಣ ಸಚಿವರಿಗೆ ಮನವಿ ಮಾಡಿದರು ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಶತಮಾನೋತ್ಸವದ ಕಾರ್ಯಕ್ರಮಗಳನ್ನು ಆಯೋಜಿಸಿ ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಹಲವಾರು ಹಳೆಯ ವಿದ್ಯಾರ್ಥಿಗಳು ಶತಮಾನೋತ್ಸವದ ಆಚರಣೆಯ ರೂಪುರೇಷೆ ಸಲಹೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಚಿವರಾದ ಬಸವರಾಜ್ ರಾಯರೆಡ್ಡಿ www.kcdcentenary.org ಕೆಸಿಡಿ ಶತಮಾನೋತ್ಸವದ ಜಾಲತಾಣಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ ಪ್ರಮೋದ ಗಾಯಿ ಮಾತನಾಡಿ, ನಾನು ಕೂಡ ಕರ್ನಾಟಕ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿದ್ದು, ಈ ಅವಧಿಯಲ್ಲಿ ನಾನು ಈ ಸಂಸ್ಥೆಯ ಮುಖ್ಯಸ್ಥನಾಗಿ ನನಗೆ ಶತಮಾನೋತ್ಸವದ ಸಂಭ್ರಮವು ಆಚರಸಿಲು ಸಂತಸತಂದಿದೆ ಎಂದ ಅವರು ಮುಂದಿನ ದಿನಗಳಲ್ಲಿ ಕರ್ನಾಟಕ ಕಾಲೇಜಿನ ಶತಮಾನೋತ್ಸವದ ಸಂಭ್ರಮದ ಆಚರಣೆಯನ್ನು ಹಳೆಯ ವಿದ್ಯಾರ್ಥಿಗಳ ಸಲಹೆ ಪಡೆದುಕೊಂಡು ರೂಪುರೇಷೆಗಳನ್ನು ರೂಪಿಸಲಾಗುವುದು ಮತ್ತು ಕಾಲೇಜಿನ ನವೀಕರಣದ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುವುದರ ಜೂತಗೆ ಉತ್ತರ ಕರ್ನಾಟಕದ ಎಲ್ಲ ಕಡೆಗೆ ಈ ಸಂಭ್ರಮದ ಆಚರಣೆಯ ನಿಮಿತ್ಯ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು. ಶತಮಾನೋತ್ಸದ ಸಂಭ್ರಮದ ಆಚರಣೆಯ ಸಲುವಾಗಿ ಎಲ್ಲ ದೇಶ ವಿದೇಶಗಳಲ್ಲಿರುವ ಹಳೆಯ ವಿದ್ಯಾರ್ಥಿಗಳು ಕೆಸಿಡಿ ಶತಮಾನೋತ್ಸವದ ವೆಬ್‌ಸೈಟ್ **www.kcdcentenary.org** ಮೂಲಕ ಕರ್ನಾಟಕ ಕಲಾ ಮಹಾವಿದ್ಯಾಲಯದ ಎಲ್ಲ ವಿದ್ಯಾರ್ಥಿಗಳು ಅಲ್ಯುಮಿನಿ ರಜಿಸ್ಟ್ರೇಶನ್ ಫಾರ್ಮದ ಮೂಲಕ ನೋಂದಣಿ ಮಾಡಿಸಿಕೋಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಅತಿಥಿಗಳನ್ನು ಪ್ರೊ ಎನ್ ವಾಯ್ ಮಟ್ಟಿಹಾಳ ಅತಿಥಿಗಳನ್ನು ಸ್ವಾಗತಿಸಿದರು, ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಇತಿಹಾಸದ ಕುರಿತು ಮಾತನಾಡಿದರು. ಕಾರ್ಯಕ್ರಮವನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿ ಡಾ ಶಶಿಧರ ನರೇಂದ್ರ ನಿರೂಪಿಸಿದರು. ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಸಿ ಎಫ್ ಮೂಲಿಮನಿ ವಂದಿಸಿದರು.

–ಕುಮಾರ್
(5ನೇ ಸೆಮಿಸ್ಟರ್)

# ವಿದ್ಯಾರ್ಥಿಗಳ ಚಿತ್ತ ಧನಾತ್ಮಕವಾಗಿರಲಿ: ಪ್ರೊ. ವಿಜಯಲಕ್ಷ್ಮಿ ಅಮ್ಮಿನಭಾವಿ







**ಕರ್ನಾಟಕ ವಿಶ್ವವಿದ್ಯಾಲಯದ ಸಮಾಜ ನಿಖಾಯದ ಡೀನ್‌ರಾದ ಪ್ರೋ ವಿಜಯಲಕ್ಷ್ಮಿ ಅಮ್ಮಿನಭಾವಿ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೇನ್ ಸಭಾಂಗಣದಲ್ಲಿ, 2017–18ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳನ್ನು ಸ್ವಾಗತಿಸುತ್ತಾ ಅವರು ಕಾರ್ಯಚಟುವಟಿಕೆಗಳ ಸಮಾರಂಭವನ್ನು ಉದ್ಘಾಟಿಸುತ್ತಿರುವದು. ಚಿತ್ರದಲ್ಲಿ ಡಾ ಎಸ್ ಜಿ ಜಾಧವ್, ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ, ಡಾ ರಜನಿ ಹೆಚ್ ಮತ್ತು ಸ್ಟೇಲ್ಲಾ ಸ್ಟಿವನ್ ಇದ್ದಾರೆ.**
**ಹಾಗೇಯೇ ಮತ್ತೊಂದರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸಮಾಜ ನಿಖಾಯದ ಡೀನ್‌ರಾದ ಪ್ರೋ ವಿಜಯಲಕ್ಷ್ಮಿ ಅಮ್ಮಿನಭಾವಿ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೆನ್ ಸಭಾಂಗಣದಲ್ಲಿ, 2017–18ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳನ್ನು ಸ್ವಾಗತಿಸಿಮಾತನಾಡುತ್ತಿರುವದು.**

ವಿದ್ಯಾರ್ಥಿಗಳು ಧನಾತ್ಮಕ ಚಿಂತನೆಗಳನ್ನು ಅಳವಡಿಸಿಕೊಂಡರೆ, ಏನನ್ನಾದರೂ ಜೀವನದಲ್ಲಿ ಸಾಧಿಸಬಹುದು ಎಂದು ಕರ್ನಾಟಕ ವಿಶ್ವವಿದ್ಯಾಲಯದ ಸಮಾಜ ನಿಖಾಯದ ಡೀನ್‌ರಾದ ಪ್ರೋ ವಿಜಯಲಕ್ಷ್ಮಿ ಅಮ್ಮಿನಭಾವಿ ವಿದ್ಯಾರ್ಥಿಗಳಿಗೆ ಕೀವಿಮಾತು ಹೇಳಿದರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೆನ್ ಸಭಾಂಗಣದಲ್ಲಿ, 2017–18ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಈ ಹಂತದಲ್ಲಿ ಮನಸ್ಸು ತುಂಬಾ ಸೂಕ್ಷ್ಮತೆಯಿಂದ ಕೂಡಿದ್ದು, ಅದನ್ನು ನಿಯಂತ್ರಿಸಬೇಕದಾರೆ ನಮ್ಮ ಆಲೋಚನೆಗಳು ಧನಾತ್ಮಕವಾಗಿರಬೇಕು ಎಂದ ಅವರು ಮನುಷ್ಯನು ಶೇಕಡಾ 80 ರಷ್ಟು ಚಿಂತನೆಗಳು ಋುನಾತ್ಮಕವಾಗಿರುತ್ತವೆ ಆದ್ದರಿಂದ ನಮ್ಮ ಮನಸ್ಸನ್ನು ಸದೃಡವಾಗಿ ಇಟ್ಟುಕೂಂಡರೆ ನಮ್ಮ ದೇಹ ಮತ್ತು ನಾವು ಮಾಡುವ ಆಲೋಚನೆಗಳು ಧನಾತ್ಮಕವಾಗಿರುತ್ತವೆ ಎಂದರು. ಇಂದು ವಿದ್ಯಾರ್ಥಿಗಳು ತಮ್ಮನ್ನು ನಾನು ಯಾರು ಮತ್ತು ನಾನು ಏನು ಎಂಬ ಪ್ರಶ್ನೆಗಳನ್ನು ಹಾಕಿಕೊಳ್ಳುವದರ ಮೂಲಕ ನಮ್ಮಲ್ಲಿರುವ ಸಾಮರ್ಥ್ಯವನ್ನು ನಾವು ಸ್ವಯಂ ಗುರುತಿಸಿಕೊಳ್ಳಬೇಕು ಎಂದರು.
ಮನುಷ್ಯನಲ್ಲಿರುವ ಸಂವೇದನೆಗಳು ಅವನ ಹಿಡಿತದಲ್ಲಿ ಇದ್ದಾಗ ಮಾತ್ರ ಅವನಿಗೆ ಧನಾತ್ಮಕ ಚಿಂತನೆ ಮಾಡಲು ಸಾಧ್ಯ ಎಂದು ಉಲ್ಲೇಖಿಸಿ ಮನಸ್ಸು, ದೇಹ ಮತ್ತು ಸಂವಹನ ಇವು ಪ್ರಮುಖವಾಗಿ ಮನುಷ್ಯನಲ್ಲಿ ಇರಬೇಕಾದ ಅಂಶಗಳಾಗಿದ್ದು, ಇವುಗಳು ನಮ್ಮ ಮನಸ್ಸು ಹೇಗೆ ಚಿಂತಿಸುತ್ತದೆ ಮತ್ತು ಅದಕ್ಕೆ ದೇಹ ಹೇಗೆ ಸ್ಪಂದಿಸುತ್ತದೆ ಮತ್ತು ಅದಕ್ಕೆ ಹೇಗೆ ಪ್ರತಿಕ್ರಿಯಿಸಲಾಗುತ್ತದೆ ಎಂಬ ಅಂಶಗಳನ್ನು ಮನೋವಿಜ್ಞಾನಿಗಳು ಉಲ್ಲೇಖಿಸಿ ನಮ್ಮಲ್ಲಿರುವ ಆಲೋಚನಾ ಪ್ರಕ್ರಿಯೆಯನ್ನು ತಿಳಿಸುತ್ತದೆ ಎಂದ ಅವರು ವಿದ್ಯಾರ್ಥಿಗಳು ಇಂದು ಹತಾಶೆ ನಿರಾಶೆಯಂತಹ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದು, ಅವರು ಧನಾತ್ಮಕ ಚಿಂತನೆಯನ್ನು ಮೈಗೂಡಿಸಕೊಂಡಾಗ ಮಾತ್ರ ಇಂತಹ ಸಮಸ್ಯೆಗಳಿಂದ ಹೊರಬರಲು ಸಾಧ್ಯ ಎಂದರು.
ಕಲಿಕೆಯನ್ನುವದು ನಿರಂತರವಾಗಿ ನಡಯುವಂತಹದ್ದು,
ಆದ್ದರಿಂದ ನಾವು ಬೇರೆಯವರ ಜೀವನ ಮತ್ತು ಅವರ ಜೀವನದಲ್ಲಿ ನಡೆದ ಘಟನೆಗಳಿಂದ ನಾವು ಅನೇಕ ರೀತಿಯಿಂದ ಜೀವನ್ ಕೌಶಲ್ಯವನು ರೂಢಿಸಿಕೊಳ್ಳುವಲ್ಲಿ ಸಹಾಯಕವಾಗುತ್ತದೆ ಎಂದರು.
ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಕರ್ನಾಟಕ ಕಲಾ ಮಹಾವಿದ್ಯಾಲಯವು ಶತಮಾನೋತ್ಸವದ ವರ್ಷವಾಗಿದ್ದು, ನೀವೆಲ್ಲರೂ ತುಂಬ ಅದೃಷ್ಟಶಾಲಿಗಳಾಗಿದ್ದು, ಹೈಸ್ಕೂಲು ಹಂತದಿಂದ ಕಾಲೇಜಿನ ಜೀವನ ಪ್ರಾರಂಬಿಸಿರುವದರಿಂದ ವಿದ್ಯಾರ್ಥಿಗಳಾದ ನೀವು ಒಂದು ದಿನವು ಮತ್ತು ಗಂಟೆಯನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದ ಅವರು ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಮಹತ್ವದ ಗುರಿಯನ್ನು ಹೊಂದಬೇಕಾದದ್ದು ಅವಶ್ಯಕ ಎಂದರು.
ಇದೇ ಸಂದರ್ಭದಲ್ಲಿ ಕಳೆದ ಮಾರ್ಚ ತಿಂಗಳಿನಲ್ಲಿ ಜರುಗಿದ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪಿಯುಸಿ ಪ್ರಥಮ ಮತ್ತ ದ್ವಿತಿಯ ವರ್ಷದ ವಿದ್ಯಾರ್ಥಿಗಳನ್ನು ಹೂಗುಚ್ಚ ನೀಡಿ ಸತ್ಕರಿಸಲಾಯಿತು. ಕರ್ನಾಟಕ ಕಲಾ ಮಹಾವಿದ್ಯಾಲಯವು ಶತಮಾನೋತ್ಸವ ಆಚರಿಸುತ್ತಿರುವ ಹಿನ್ನಲೆಯಲ್ಲಿ ಕಾಲೇಜಿನ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ರಚಿಸಿದ ಕೆಸಿಡಿ ಜಯಗೀತೆಯನ್ನು ಗಾಯಕಿ ಸುಜಾತಾ ಗುರವ ವಾದ್ಯವೃಂದಗಳೊಂದಿಗೆ ಪ್ರಥಮವಾಗಿ ಹಾಡನ್ನು ಸಾದರಪಡಿಸಿದರು. ಕಾರ್ಯಕ್ರಮದಲ್ಲಿ ಡಾ ಎಮ್ ಬಿ ಧಳಪತಿ, ಡಾ ಅರುಣಾ ಹಳ್ಳಿಕೇರಿ, ಡಾ ವಿ ಶಾರದಾ, ಡಾ ಸ್ಟೇಲ್ಲಾ ಸ್ಟಿವನ್, ಡಾ ವಿಭಾ ಕುಲಕರ್ಣಿ ಮತ್ತು ಅನೇಕ ಶಿಕ್ಷಕ ಮತ್ತು ಶಿಕ್ಷಕೇತರ ವೃಂದವು ಹಾಜರಿದ್ದರು. ಮನೋವಿಜ್ಞಾನದ ಮುಖ್ಯಸ್ಥರಾದ ಡಾ ಎಸ್ ಜಿ ಜಾಧವ್ ಅವರು ಅತಿಥಿಗಳನ್ನು ಪರಿಚಯಿಸಿದರು. ಸಂಸ್ಕೃತ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ ರಜನಿ ಹೆಚ್ ಕಾರ್ಯಕ್ರಮವನ್ನು ನಿರೂಪಿಸದರು. ಡಾ ವಾಮದೇವ ತಳವಾರ ವಂದಿಸಿದರು.

ಶೃತಿ
(3ನೇ ಸೆಮಿಸ್ಟರ್)

# ಸುತ್ತಮುತ್ತಲಿನ ಪರಿಸರ ಸ್ವಚ್ಛತೆ ಕಾಪಾಡುವಿಕೆ ನಮ್ಮೆಲ್ಲರ ಕರ್ತವ್ಯ: ಡಾ.ಎಮ್.ದಳಪತಿ






**ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೆನ್ ಸಭಾಂಗಣದಲ್ಲಿ ಆಯೋಜಿಸಿದ ಭಾರತ ಸರಕಾರದ ಮಹತ್ವಕಾಂಕ್ಷಿ ಯೋಜನೆಯಾದ ಸ್ವಚ್ಛ ಭಾರತ ಅಭಿಯಾನ ಅಡಿಯಲ್ಲಿ 'ಸ್ವಚ್ಛತಾ ಪಖವಾರಾ' ಎಂಬ ಕೇಂದ್ರ ಸರಕಾರದ ಹದಿನೈದು ದಿನಗಳ ಒಂದು ಸ್ವಚ್ಛತಾ ಅಭಿಯಾನವನ್ನು ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ದೀಪ ಬೆಳಗಿಸುವದರ ಮೂಲಕ ಅಭಿಯಾನಕ್ಕೆ ಚಾಲನೆ ನೀಡುತ್ತಿರುವದು. ಚಿತ್ರದಲ್ಲಿ ಡಾ ಬಿ ಎಸ್ ಭಜಂತ್ರಿ, ಡಾ. ಶೀಲಾ ಭಂಡಾರಿ, ಡಾ ಎಮ್ ಬಿ ದಳಪತಿ, ಡಾ ಝೂಕೀರ್ ಗುಳಗುಂಡಿ ನಿಲಾ ಭಂಡಾರಿ ಕಾಣಬಹುದು.ಹಾಗೆಯೇ ಮತ್ತೊಂದು ಚಿತ್ರದಲ್ಲಿ ಡಾ.ಎಮ.ಬಿ.ದಳಪತಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಿರುವದು**

ಶಿಸ್ತು, ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ನಮ್ಮ ಸುತ್ತಮುತ್ತಲಿರುವ ಪರಿಸರವನ್ನು ಕಾಪಾಡುವದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿ ಡಾ. ಎಮ್ ದಳಪತಿ ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡದರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೇನ್ ಸಭಾಂಗಣದಲ್ಲಿ ಆಯೋಜಿಸಿದ ಭಾರತ ಸರಕಾರದ ಮಹತ್ವಕಾಂಕ್ಷಿ ಯೋಜನೆಯಾದ ಸ್ವಚ್ಛ ಭಾರತ ಅಭಿಯಾನ ಅಡಿಯಲ್ಲಿ 'ಸ್ವಚ್ಛತಾ ಪಖವಾರಾ' ಎಂಬ ಕೇಂದ್ರ ಸರಕಾರದ ಹದಿನೈದು ದಿನಗಳ ಒಂದು ಸ್ವಚ್ಛತಾ ಅಭಿಯಾನವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.
ನಾವು ವಾಸಿಸುವ ಪರಿಸರವನ್ನು ಸ್ವಚ್ಛತೆಯಿಂದ ಇಟ್ಟಾಗ ನಮಗೆ ಆಹ್ಲಾದಕರ ವಾತಾವರಣ ಲಭಿಸುವುದರ ಜತೆಗೆ ಆರೋಗ್ಯ ದೃಷ್ಟಿಯಿಂದ ಉಪಯೋಗಕಾರಿ ಆದ್ದರಿಂದ ನಾವೆಲ್ಲರು ನಮ್ಮ ದೇಶ ನಮ್ಮ ರಾಜ್ಯ ಮತ್ತು ನಮ್ಮ ಊರು ಹಾಗೂ ನಾವು ಇರುವ ಸ್ಥಳವನ್ನು ಶುಚಿಯಾಗಿಡುವದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ಪತ್ರಿಯೋಬ್ಬ ವಿದ್ಯಾರ್ಥಿಯು ಸ್ವಯಂ ಸ್ಫೂರ್ತಿಯಿಂದ ಸ್ವಚ್ಛತಾ ಅಭಿಯಾನದ ಕೈಗೂಳ್ಳುವುದರಿಂದ ಇನ್ನೊಬ್ಬರಿಗೆ ಮಾದರಿಯಾಗಬಹುದು ಎಂದ ಅವರು ಈ ಯೋಜನೆಯು ನನ್ನ ಗ್ರಾಮ, ನನ್ನ ಮನೆ ಮತ್ತು ನನ್ನ ಸಮಾಜ ಎಂಬ ಪರಿಕಲ್ಪನೆಯೊಂದಿಗೆ ದೇಶದಲ್ಲಿರುವ ಎಲ್ಲ ವಿದ್ಯಾರ್ಥಿಗಳಿಗೆ ಸ್ವಚ್ಛತೆಯ ಮಹತ್ವದ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಕೇಂದ್ರ ಸರಕಾರವು ಈ ಯೋಜನೆ ಆಗಸ್ಟ್ 1 ರಿಂದ ಆಗಸ್ಟ್ 15 ವರೆಗೆ ಸ್ವಚ್ಛತೆಯ ಅಭಿಯಾನದ ಮೂಲಕ ವಿವಿಧ ಕಾರ್ಯಕ್ರಮಗಳನ್ನು ಕರ್ನಾಟಕ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ವಿವರಿಸಿದರು.
ಕರ್ನಾಟಕ ಕಲಾ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾಯೋಜನೆಯ 'ಅ' ಘಟಕದ ಸಂಯೋಜನಾಧಿಕಾರಿ ಡಾ ಬಿ.ಎಸ್ ಭಜಂತ್ರಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ 'ಸ್ವಚ್ಛತಾ ಪಖವಾರಾ' ಎಂಬ ಕೇಂದ್ರ ಸರಕಾರದ ಸ್ವಚ್ಚತಾ ಅಭಿಯಾನದ ಮೂಲಕ ಕಾಲೇಜಿನಲ್ಲಿ ಸ್ವಚ್ಚತೆಯ ಕುರಿತು ಸಂಪನ್ಮೂಲಗಳಿಂದ ಉಪನ್ಯಾಸ, ಕಾಲೇಜಿನ ಆವರಣವನ್ನು ಸ್ವಚ್ಛಗೂಳಿಸುವದು, ಕಾಲೇಜಿನ ಎನ್–ಎಸ್‌ಎಸ್ ಘಟಕವು ದತ್ತು ಪಡೆದ ಗ್ರಾಮಗಳಲ್ಲಿ ಸ್ವಚ್ಛತೆ ಕುರಿತು ವಿದ್ಯಾರ್ಥಿಗಳಿಂದ ಜನರಿಗೆ ಮಾಹಿತಿ ಒದಗಿಸುವದರ ಜೂತೆಗೆ ಸ್ವಚ್ಛತಾ ಅಭಿಯಾನದ ರ್‍ಯಾಲಿ ಹಮ್ಮಿಕೊಳ್ಳುವುದರ ಜತೆಗೆ ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿವದು ಈ ಒಂದು ಅಭಿಯಾನದ ಉದ್ದೇಶವಾಗಿದೆ ಎಂದು ವಿವ–ರಿಸಿದರು.
ಸ್ವಚ್ಛತಾ ಅಭಿಯಾನವನ್ನು ಉದ್ಘಾಟಿಸಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಈ ಅಭಿಯಾನದ ಮುಖ್ಯ ಉದ್ದೇಶವು ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲಿರುವ ಪರಿಸರವನ್ನು ಸ್ವಚ್ಛ ಇಟ್ಟುಕೊಳ್ಳುವುದರ ಜೊತೆಗೆ ಸ್ವಚ್ಛತೆ ಕುರಿತು ಇನ್ನೊಬ್ಬರಿಗೆ ಅದರ ಬಗ್ಗೆ ಅರಿವನ್ನು ಮೂಡಿಸುವುದಾಗಿದೆ ಎಂದ ಅವರು ವಾರಕ್ಕೆ ಎರಡು ತಾಸು ಮತ್ತು ವರ್ಷಕ್ಕೆ ನೂರು ತಾಸು ಎಂಬ ಘೋಷಣೆ ಮೂಲಕ ವಿದ್ಯಾರ್ಥಿಗಳಿಗೆ ಪ್ರಮಾಣವಚನ ಬೋಧಿಸಿದರು.
ಕಾರ್ಯಕ್ರಮದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ವಿವಿಧ ವಿಭಾಗಗಳ ಪ್ರಾಧ್ಯಾಪಕರು ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಘಟಕದ ಸ್ವಯಂ ಸೇವಕರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು. ಕಾರ್ಯಕ್ರಮವನ್ನು ಎನ್. ಎಸ್.ಎಸ್ ಘಟಕದ ಸಂಯೋಜನಾಧಿಕಾರಿಗಳಾದ ಡಾ.ಬಿ ಎಸ್ ಭಜಂತ್ರಿ ನಿರೂಪಿಸದರು. ಡಾ ಝೂಕೀರ್ ಗುಳಗುಂಡಿ ವಂದಿಸಿದರು.

–ರೋಹಿಣಿ
5ನೇ ಸೆಮಿಸ್ಟರ್

ಗೌರವ ಸಂಪಾದಕರು: ಡಾ. ರಾಜೇಶ್ವರಿ ಮಹೇಶ್ವರಯ್ಯ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ. ರವೀಂದ್ರ ಜಲರೆಡ್ಡಿ, ವಿದ್ಯಾರ್ಥಿ ಸಂಪಾದಕರು: ಸುನೀಲ,ನಿತಿನ್. ಪುಟ ವಿನ್ಯಾಸ: ಶ್ರೀಹರಿ.